# ನದಿಯೊಂದು ಓಡಿದೆ..



‘ಹೃದಯದಲಿ ಇದೇನಿದು ನದಿಯೊಂದು ಓಡಿದೆ’ ಎನ್ನುವ ಸಾಲು ಪ್ರಸ್ತುತ ನಟಿ ಸಂಜನಾ ಅವರ ಉತ್ಸಾಹಕ್ಕೆ ಹೊಂದುವಂತಿದೆ. ಅದೂ ಸಾಧಾರಣ ನದಿಯಲ್ಲ– ‘ಮಹಾನದಿ’.

ಕೃಷ್ಣಪ್ಪ ಉಪ್ಪೂರು ನಿರ್ದೇಶನದ ‘ಮಹಾನದಿ’ ಚಿತ್ರದ ಚಿತ್ರೀಕರಣ ಮುಗಿದಿದೆ. ಈ ಚಿತ್ರದ ಬಗ್ಗೆ ಸಂಜನಾ ಅವರಿಗೆ ಸಿಕ್ಕಾಪಟ್ಟೆ ನಿರೀಕ್ಷೆ. ಅದಕ್ಕೆ ಕಾರಣಗಳೂ ಇವೆ. ‘ಮಹಾನದಿ’ ನಾಯಕಿ ಪ್ರಧಾನ ಚಿತ್ರ. ಇಡೀ ಚಿತ್ರ ಸಂಜನಾ ಅವರ ಪಾತ್ರದ ಸುತ್ತಲೇ ಸುತ್ತುತ್ತದೆ. ನದಿಯ ಹರಿವು ಹಾಗೂ ಜೀವಂತಿಕೆ ಅವರ ಪಾತ್ರದಲ್ಲೂ ಇದೆ. ‘ಯಾವ ನಟಿಯಾದರೂ ಹಂಬಲಿಸುವಂತಹ ಪಾತ್ರ’ ಎನ್ನುವುದು ಅವರ ಬಣ್ಣನೆ.

ಸಂಜನಾ ಸದಾ ಸುದ್ದಿಯಲ್ಲಿ ಇರುತ್ತಾರಾದರೂ ಪಾತ್ರಗಳ ಮೂಲಕ ಅವರು ಸುದ್ದಿ ಮಾಡಿರುವುದು ಕಡಿಮೆ. ‘ಗ್ಲಾಮರ್ ಗರ್ಲ್’ ಎಂದೇ ಅವರು ಚಿತ್ರೋದ್ಯಮದಲ್ಲಿ ಪ್ರಸಿದ್ಧಿ. ಈ ಎಲ್ಲ ಕ್ಲೀಷೆಗಳನ್ನು ‘ಮಹಾನದಿ’ ಪಾತ್ರ ಅಳಿಸಿ ಹಾಕಲಿದೆ ಎನ್ನುವುದು ಸಂಜನಾ ವಿಶ್ವಾಸ. ಈ ಸಿನಿಮಾ ಗೆದ್ದರೆ ಮುಂದಿನ ದಿನಗಳಲ್ಲಿ ಅವರನ್ನು ‘ಮಹಾನದಿ ಸಂಜನಾ’ ಎಂದೇ ಕರೆಯಬಹುದೇನೊ?

ಅಂದ ಹಾಗೆ, ಸಂಜನಾ ಜೊತೆಗೆ ದಿಲೀಪ್ ರಾಜ್, ಲೋಕನಾಥ್, ಶೋಭರಾಜ್, ರಂಗಾಯಣ ರಘು ಅವರಂಥ ಅನುಭವಿಗಳ ದಂಡು ‘ಮಹಾನದಿ’ಯಲ್ಲಿದೆ. ಸ್ತ್ರೀ ಪ್ರಧಾನ ಕಥನಗಳು ಕಡಿಮೆ ಆಗುತ್ತಿರುವ ಸಂದರ್ಭದಲ್ಲಿ ಈ ಚಿತ್ರ ಕುತೂಹಲ ಕೆರಳಿಸುವಂತಿದೆ.

■ ರಘು




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65